ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಕುಂಬಾರ ಸಂಘದ ಆಡಳಿತ ಮಂಡಳಿಯ ಕುರಿತು.

ಡಾ|| ತೇಜಸ್ವಿನಿಗೌಡ(ವಿಧಾನಸಭೆಯಿಂದ ಚುನಾಯಿತರಾದವರು) –

719 (832) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಾಸಿಪಾಳ್ಯಂನಲ್ಲಿರುವ ಕುಂಬಾರ ಸಂಘ ಪ್ರಾರಂಭಗೊಂಡಿದ್ದು ಯಾವಾಗ ಹಾಗೂ ಇದರ ಸ್ಥಾಪಕರು ಯಾರು;

(ಆ) ಸಂಘದ ನಿವೇಶನವನ್ನು ಯಾರಿಗೆ ಯಾವಾಗ ಮಂಜೂರು ಮಾಡಲಾಗಿತ್ತು;

(ಇ) ಸಂಘದ ಆದಾಯ ವೆಚ್ಚಗಳ ಬಗ್ಗೆ ಪ್ರತಿ ವರ್ಷ ಆಡಿಟ್ ಮಾಡಿಸಲಾಗಿದೆಯೇ; ಮಾಡಿಸಿದ್ದಲ್ಲಿ, ಕಳೆದ 5 ವರ್ಷಗಳ ವಾರ್ಷಿಕ ವರದಿಯ ವಿವರಗಳನ್ನು ಒದಗಿಸುವುದು;

(ಈ) ಸದರಿ ಸಂಘದ ಆಡಳಿತ ಮಂಡಳಿಯ ಚುನಾವಣೆಗಳನ್ನು ಕಾಲ ಕಾಲಕ್ಕೆ ನಿಯಮಿತವಾಗಿ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಪ್ರಸ್ತುತ ಅಸ್ತಿತ್ವದಲ್ಲಿರುವ ಆಡಳಿತ ಮಂಡಳಿಗೆ ಚುನಾವಣೆ ನಡೆದಿದ್ದು ಯಾವಾಗ; ಸದರಿ ಚುನಾಯಿತ ಮಂಡಳಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ವಿವರ ನೀಡುವುದು;

(ಉ) ಸದರಿ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಸದರಿ ವಿದ್ಯಾರ್ಥಿಗಳಿಂದ ಹಾಸ್ಟೆಲ್ ಫೀಯನ್ನು ವಸೂಲಿ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ಹಾಸ್ಟೆಲ್ ಫೀ ಎಷ್ಟು; (ಸಂಗ್ರಹಿಸಲಾದ ಹಾಗೂ ಖರ್ಚಾದ ಹಣದ ವರ್ಷಾವಾರು ಮಾಹಿತಿಯನ್ನು ಒದಗಿಸುವುದು)

(ಊ) ಸರ್ಕಾರದಿಂದ ಯಾವ ಯಾವ ಬಾಬ್ತುಗಳಿಗೆ ಅನುದಾನ ಪಡೆಯಲಾಗುತ್ತಿದೆ ಹಾಗೂ ಅದು ಕ್ರಮವಾಗಿ ಸದ್ಬಳಕೆ ಆಗುತ್ತಿದೆಯೇ;

(ಋ) ಸದರಿ ಸಂಘದ ನೋಂದಣಿಯನ್ನು ಪ್ರತಿ ವರ್ಷ ನವೀಕರಿಸಲಾಗುತ್ತಿದೆಯೇ; ಪ್ರಸಕ್ತ ಸಾಲಿಗೆ ನವೀಕರಿಸಿದ ಸಂಖ್ಯೆ ಮತ್ತು ದಿನಾಂಕವನ್ನು ಒದಗಿಸುವುದು?